ಹೀಗೆ ಜಗತ್ತಿನ ಬೇರೆ ಭಾಗದ ಪುರಾತನ ನಾಗರಿಕತೆಗಳ ಸಿದ್ಧಾಂತಗಳ ಉಲ್ಲೇಖ ಮಂಡಿಸುತ್ತ ಹೋಗುತ್ತಿದ್ದ. 'ತಡಿ, ಚಾನಲ್ ಬದಲಿಸ್ಬೇಡ' ಅಂದರು. ಇದ್ದಕ್ಕಿದ್ದಂತೆ ಚುರುಕಾಗಿ ಲವಲವಿಕೆಯಿಂದ ಓಡಾಡುವ ಗಂಡನನ್ನು ಕಂಡು ಗಿರಿಜಾಳಿಗೆ ನೆಮ್ಮದಿಯಾದರೂ ಇದು ಮನೋರೋಗದ ಇನ್ನೊಂದು ಮುಖವಿರಬಹುದೇ ಅಂತ ದಿಗಿಲೂ ಆಯಿತು.

ಯಾವ ಸಮಸ್ಯೆಯೂ ಇಲ್ಲ ಅನ್ನವ ಆನಂದದಲ್ಲಿ ಹಣದ ವಿಚಾರವನ್ನೇ ಮರೆತು ಓಡಾಡಿಕೊಂಡಿದ್ದರು ಹೆಗಡೆಯವರು. ಆವತ್ತು ಇಪ್ಪತ್ತೊಂದನೆ ತಾರೀಕು. ಬೆಳಿಗ್ಗೆ ಎದ್ದವರು ಸ್ನಾನಮಾಡಿ ಪೂಜೆ ಮುಗಿಸಿ ಹೆಂಡತಿಗೆ, 'ಮಧ್ಯಾಹ್ನ ಹೋಳಿಗೆ ಮಾಡು...' ಅಂದರು. ಒಳದನಿಯಲ್ಲಿ ಭಾವಗೀತೆ ಹಾಡಿಕೊಳ್ಳುತ್ತ ಲವಲವಿಕೆಯಲ್ಲಿದ್ದ ಗಂಡನನ್ನು ಏನೂ ಕೇಳದೆ ತಯಾರಿ ನಡೆಸಿದರು. ಪಟ್ಟಾಗಿ ಮೂರು ಹೋಳಿಗೆಯನ್ನು ತುಪ್ಪದಲ್ಲದ್ದಿ ತಿಂದು ತೇಗಿದರು. ರಾತ್ರಿಯೂಟದಲ್ಲು ಎರಡು ಹೋಳಿಗೆ ತಿಂದರು. ಮಲಗುವ ಮುಂಚೆ ದೇವರ ಪೀಠದೆದುರು ನಿಂತು ನಮಸ್ಕಾರ ಮಾಡಿ, 'ಏನೇನೋ ಯೋಜನೆ ಹಾಕತಾರೆ. ಜನಕ್ಕೆ ಹುಚ್ಚು' ಅಂತ ದೇವರ ಹತ್ತಿರ ಗುಟ್ಟು ಹಂಚಿಕೊಳ್ಳುವಂತೆ ಆಪ್ತವಾಗಿ ನಕ್ಕು ಮಲಗಲು ಹೋದರು.

ಎಚ್ಚರವಾಯಿತು. ಕಿಟಕಿಯತ್ತ ನೋಡಿದವರಿಗೆ ನಕ್ಷತ್ರಗಳಿಂದ ಇದು ಬೆಳಗಿನ ಜಾವ ಅಂತ ಗೊತ್ತಾಯಿತು. ಮಗ್ಗುಲಾಗಿ ಮಂಚದಂಚಿಂದ ನಿಧಾನವಾಗಿ ಕೈ ಅದ್ದಿದರು. ನೀರು ತಾಗಲಿಲ್ಲ. ಏನೋ ಸದ್ದು ಕೇಳಿಸಿತು. ಆಲಿಸಿದರು. ತೃಪ್ತಿಯೆನಿಸಿತು. ಹೌದು, ಎಲ್ಲಾ ತೇಲಿ ಕೊಚ್ಚಿಕೊಂಡುಹೋಗುತ್ತಿದೆ. ಇಲ್ಲಿ ಕೆಳವರೆಗೆ ತುಂಬಿರಬಹುದು ಅಂತ ನಿಧಾನವಾಗಿ ಕಾಲು ಇಳಿಬಿಟ್ಟರು. ನೀರಿರಲಿಲ್ಲ, ನೆಲವೂ ಒಣಗಿಯೇ ಇದೆ. ತಾರೀಕು ಸರಿಯಾಗೆ ಇದೆ. ಈಗಿನ್ನು ಬೆಳಗಿನ ಜಾವ; ಸಮಯವಿದೆ. ಪ್ರಳಯದ ನೀರು ಮೆಟ್ಟಿಲವರೆಗಂತು ಬಂದೇ ಇರುತ್ತದೆ ಅಂತ ಎದ್ದರು. ನಿಧಾನವಾಗಿ ನಡೆದು ಮುಂಬಾಗಿಲು ತೆರೆದರು. ಮೆಟ್ಟಿಲ ಹತ್ತಿರ ನೀರಿರಲಿಲ್ಲ. ನಿರೀಕ್ಷೆಯಿಂದ ಮೆಟ್ಟಲಿಳಿದು ಧಾವಿಸಿ ಕೆಳಗೆ ರಸ್ತೆಗೆ ಬಂದರು. ಆ ತುದಿಯಲ್ಲಾಗಲಿ ಈ ತುದಿಯಲ್ಲಾಗಲಿ ನೀರಿನ ಸುಳಿವಿಲ್ಲ. ರಸ್ತೆ ದಾಟಿ ಕಾಲುವೆಯಂಚಿನಲ್ಲಿ ಕುಳಿತು ಮೂತ್ರ ಹೊಯ್ದರು. ಕಾಲುವೆಯಲ್ಲು ನೀರಿದ್ದ ಸದ್ದಿಲ್ಲ. ನಿಟ್ಟುಸಿರು ಬಿಡುತ್ತ ನಿಂತವರಿಗೆ ದೂರದಲ್ಲಿ ಕೋಳಿ ಕೂಗುವುದು ಕೇಳಿಸಿತು.

---


**ಬನವಾಸಿ ವೆಂಕಟೇಶ ದೀಕ್ಷಿತ**

ಲೇಖಕರು ಪತ್ರಿಕೆಗಳಲ್ಲಿ ಸುಮಾರು 150ಕ್ಕೂ ಹೆಚ್ಚು ಕತೆಗಳನ್ನು ಪ್ರಕಟಿಸಿದ್ದಾರೆ. ಬೆಂಗಳಿ ಮತ್ತು ಶಿರಸಿಯಲ್ಲಿ ವಿದ್ಯಾಭ್ಯಾಸ. ಪ್ರಸ್ತುತ ಬೆಂಗಳೂರಿನಲ್ಲಿ ವಾಸ.

ಬಿ.ಎಸ್ಸಿ. ಪದವಿ. ಅಂಚೆ ಇಲಾಖೆಯಲ್ಲಿ ಕಲಬುರ್ಗಿಯಲ್ಲಿ, ವೃತ್ತಿಜೀವನದ ಆರಂಭ. ಅಲ್ಲಿಂದ ಭಾರತೀಯ ಸೇನೆಯಲ್ಲಿ ಸೇರಿ, ವಾರಂಟ್ ಆಫೀಸರಾಗಿ ಕಾಶ್ಮೀರದ ಬಾರಾಮುಲ್ಲಾ, ಕುಪ್ವಾಡಾ, ಶ್ರೀನಗರ, ನಗ್ರೋಟ ಮತ್ತು ನವದೆಹಲಿ, ನಾಗಪುರಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಸೇನೆಯ ಸೇವೆಯ ಬಳಿಕ ದೂರಸಂಪರ್ಕ ಇಲಾಖೆಯಲ್ಲಿ ಕಿರಿಯ ಲೇಖಾಧಿಕಾರಿಯಾಗಿ, ಮುಖ್ಯ ಲೆಕ್ಕಾಧಿಕಾರಿಯಾಗಿ, ಉಪಮಹಾಪ್ರಬಂಧಕರ ವೇತನಶ್ರೇಣಿಯಲ್ಲಿ ನಿವೃತ್ತರಾಗಿದ್ದಾರೆ. ಪ್ರಕಟಿತ ಕಥಾ ಸಂಕಲನ 'ಕಾವಡಿ'.